*ಮಾಗಡಿ ಶ್ರೀನಿವಾಸ್, ಬಾಳೆಕಟ್ಟೆ*
*ಪ್ರೀತಿಗೆ ಕಣ್ಣಿಲ್ಲ ಎನ್ನುತ್ತಾರೆ. ಆದರೆ ಪ್ರೀತಿ ಹುಟ್ಟುವುದೇ ಕಣ್ಣಿನಲ್ಲಿ ಎನ್ನುತ್ತಾರೆ. ಯಾವುದು ಸರಿ?*



ಎರಡೂ ಸರಿಯೇ ಇದೆಯಲ್ಲ. ಕಣ್ಣಿನಲ್ಲಿ ಹುಟ್ಟಿದ ಪ್ರೀತಿಗೆ ಕಣ್ಣಿಲ್ಲ!

*ಕೃಷ್ಣಮೂರ್ತಿ ಮನ್ನಾರ್, ಶಿರಸಿ*
*ಭವಿಷ್ಯ ಭಾರತದಲ್ಲಿ ಮುಸ್ಲಿಮರೇ ಬಹುಸಂಖ್ಯಾತರಾದರೆ ದೇಶದಲ್ಲಿ ಪ್ರಜಾಪ್ರಭುತ್ವ, ಜಾತ್ಯತೀತತೆ ಉಳಿಯಬಹುದೆ?*
ಏಕಾಗಬಾರದು? ಸಂವಿಧಾನಬದ್ಧತೆ ಇದ್ದರೆ ಯಾವುದೇ ಬಣ ಹೆಚ್ಚಾದರೂ ದೇಶದ ಬಣ್ಣ ಬದಲಾಗದು!

*ಟಿ. ಮನು ಹರೀಶ್, ಹುಬ್ಬಳ್ಳಿ*
*ಒಂದಕ್ಕೆ ಹತ್ತರಷ್ಟು ಬರುತ್ತೆ ಅಂತ ನಂಬಿ ಶೇರ್‌ಗೆ ದುಡ್ಡು ಹಾಕಿದವರ ಗತಿ ಏನು?*
ಆ ಬಾಬ್ತೇ ಹಾಗೆ. ಹಣ ಹೂಡಿದಾಗ ಆಂಗ್ಲದ ಶೇರ್ ಅರ್ಥಾತ್ ಪಾಲು, ಹೂಡಿದ ನಂತರ ಹಿಂದಿಯ ಶೇರ್ ಅರ್ಥಾತ್ ಹುಲಿಯಾಗಿ ಹೂಡಿಕೆದಾರನನ್ನೇ ಕಬಳಿಸುತ್ತದೆ!

*ಮುರಲೀಧರ ಕುಲಕರ್ಣಿ, ಬೀದರ್*
*ಗಾಂಧಿನಗರದಲ್ಲಿ ಕ್ಯಾಬರೆ ಹೊಟೆಲ್‌ಗಳು, ಮಹಾತ್ಮಾ ಗಾಂಧಿ ರಸ್ತೆಯಲ್ಲಿ ಬಾರ್‌ಗಳು! ಇದು ನಾವು ರಾಷ್ಟ್ರಪಿತನಿಗೆ ಕೊಡುವ ಗೌರವವೋ?*




ಅದಕ್ಕೇ ಇಲ್ಲಿ ಯಾವ ಗಾಂಧಿ ಎಂದು ಹೇಳಿಲ್ಲ, ಅಲ್ಲಿ ಹೆಸರು ಮೊಟಕುಗೊಳಿಸಿ ಎಂ.ಜಿ. ಮಾಡಿದ್ದೇವೆ ಎಂದನೊಬ್ಬ ಕಾರ್ಪೊರೇಶನಿ.

*ಪಿ.ಎಸ್.ಶ್ರೀವತ್ಸ, ಬೆಂಗಳೂರು*
*ಕೆಲವರು ಇದ್ದೂ ಅನುಭವಿಸುವುದಿಲ್ಲವಲ್ಲಾ, ಏಕೆ?*
ಲೋಕಾಯುಕ್ತರ ಭಯ!

*ಮಹೇಶ್ ಕೆ ವಿಭೂತಿ, ಹರಿಹರ*
*ಮತಾಂಧತೆ ಮನುಕುಲದ ಅಳಿವಿಗೆ ಕಾರಣವಾಗಬಹುದೇ ಅಂಕಲ್?*
ಮನುಕುಲಕ್ಕೆ ಸಾವಿಲ್ಲ. ಅನಿವಾರ್ಯತೆಗೆ ಆತುಕೊಂಡು ಅಳಿಯದಿರುವುದೇ ಅದರ ಅಗ್ಗಳಿಕೆ.

*ಎಂ.ಬಿ. ಖೋದಾನಪೂರ, ಸವದತ್ತಿ*
*ಮಗಳಂತೆ ಸೊಸೆಯನ್ನು ಕಾಣುವ ಅತ್ತೆಯರು ಈಗಲೂ ಇರುವರೇ?*
ಇಲ್ಲದೆ ಏನು! ಸೊಸೆಯನ್ನೂ ಮಗಳನ್ನು ಕಾಡಿದಷ್ಟೇ ಕಾಡುವರಷ್ಟೆ!

*ಬಾ.ರಂ.ಸುರೇಶ್, ಶಿವಮೊಗ್ಗ*
*ನನ್ನ ರಾಶಿಭವಿಷ್ಯದಲ್ಲಿ ಹೆಂಡತಿಯಿಂದ ಅಸಹಕಾರ ವಿರೋಧ, ಮನಸ್ತಾಪ, ಜಗಳ, ಅನ್ಯೋನ್ಯ ದಾಂಪತ್ಯವೆಂದಿದೆ. ಇದರರ್ಥವೇನು ಶಿವಾ?*
ಯಾರ ಹೆಂಡತಿಯಿಂದ?

*ಎಸ್.ಆರ್.ಶ್ರೇಯಸ್, ಮೈಸೂರು*
*ನಮ್ಮ ರಾಜಕಾರಣಿಗಳಿಗೂ, ಕುಡಿದು ಬಿದ್ದು ಅಶ್ಲೀಲವಾಗಿ ಮಾತನಾಡುವ ಕುಡುಕರಿಗೂ ವ್ಯತ್ಯಾಸವೇ ಇಲ್ಲವಲ್ಲಾ...?*
ಆದರೂ ಕುಡುಕರೇ ವಾಸಿ. ಕುಡಿದಾಗಲಾದರೂ ನಿಜ ಹೇಳುವರವರು.

*ಸುನಂದಮ್ಮ, ಗೌರಿಬಿದನೂರು*
*ಮೂರ್ಖ ಪ್ರಶ್ನೆಗಳಿಗೆ ನೀವು ಉತ್ತರ ಕೊಡುವುದಲ್ಲದೆ ಬಹುಮಾನಿತ ಪ್ರಶ್ನೆ ಎಂದು ಘೋಷಿಸುವ ನಿಮ್ಮನ್ನು ಏನೆನ್ನಬೇಕು?*
ಮೂರ್ಖರನ್ನು ಚುನಾಯಿಸಿ ಮಂತ್ರಿಪದವಿಯನ್ನೇ ಕೊಡುವ ನಮ್ಮಲ್ಲಿ ಇದಾವ ಮಹಾಪರಾಧ!

*ಜಾಕೋಬ್ ಡಿಸೋಜ, ಕುರುವಳ್ಳಿ*
*ರಾಜಕಾರಣಿಗಳಿಗೆ ಬಡವರ ಮೇಲೆ ಕನಿಕರ ಎಷ್ಟಿರುತ್ತೆ?*
ತೋಳಕ್ಕೆ ಕುರಿಮರಿಯ ಮೇಲಿರುವಷ್ಟು!

*ಸೊ.ನಾ.ಶ್ರೀಧರಮೂರ್ತಿ, ದಾವಣಗೆರೆ*
*ಮನವೆಂಬ ಕುದುರೆಗೆ ಕಡಿವಾಣ ತೊಡಿಸಿ ಹತೋಟಿಯಲ್ಲಿಟ್ಟುಕೊಳ್ಳುವುದು ಹೇಗೆ?*
ಸಂಸ್ಕಾರವೆಂಬ ರಥವನ್ನು ಅದಕ್ಕೆ ಹೂಡಿ, ನಾಗರಿಕತೆ ಎಂಬ ಸಾರಥಿಯನ್ನು ನೇಮಿಸುವುದರ ಮೂಲಕ!

*ಅಕ್ಷಯ ಜೈನ್, ಹೂವಿನಹಡಗಲಿ*
*ನಿಮ್ಮ ಉತ್ತರದ ಸಂವಾದ ಇರುವುದು ನೋಡಿದರೆ ನಿಮ್ಮ ದಾಂಪತ್ಯ ...?*
ಪಥ್ಯದಲ್ಲೇ ಇದೆ!

*ರಘುನಾಥರಾವ್ ತಾಪ್ಸೆ, ದಾವಣಗೆರೆ*
*ಆಶೀರ್ವಾದ ಮಾಡಲು ಅರ್ಹತೆ ಇರಬೇಕಂತೆ; ಪಡೆಯುವವನಿಗೆ?*
ಅರ್ಹತೆ ಪಡೆಯುವ ಛಲ, ತಾಕತ್ತು ಇರಬೇಕು.

## ಬಹುಮಾನಿತ ಪ್ರಶ್ನೆ

*ಜಿ.ಸುಬ್ಬನಾಯಕ ಬೊಮ್ಮಲಾಪುರ,ಗುಂಡ್ಲುಪೇಟೆ*
*ಲಾಯರ್ ಹತ್ತಿರ ನಿಜ ಹೇಳಬಾರದು, ಡಾಕ್ಟರ್ ಹತ್ತಿರ ಸುಳ್ಳು ಹೇಳಬಾರದು. ರಾಜಕೀಯದವರ ಹತ್ತಿರ?*
ಏನೂ ಹೇಳಬಾರದು ಎಂಬುದು ನಂತರದ ಮಾತು; ಅಸಲಿಗೆ ಅವರ ಹತ್ತಿರವೇ ಹೋಗಬಾರದು!

*ಮಹೇಶ್ ಜಿ ಹೆಗಡೆ, ಹೆಗ್ಗೆ*
*ಗಾಂಧೀಜಿಯವರ ರಾಮರಾಜ್ಯದ ಕನಸು ರಾವಣರಾಜ್ಯವಾಗಿ ಮೆರೆದಾಡುತ್ತಿದೆಯಲ್ಲಾ...?*
ರಾವಣನ ಲಂಕೆ ಬಹಳ ಶ್ರೀಮಂತವಾಗಿತ್ತು, ಆಡಳಿತ ಚೆನ್ನಾಗಿತ್ತು! ನಮ್ಮದು ಇನ್ನೂ ಆ ಮಟ್ಟಕ್ಕೂ ಬಂದಿಲ್ಲ ಹೆಗಡೆಜೀ!

*ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ*
*ಎಷ್ಟೇ ಕಷ್ಟಪಟ್ಟರೂ ಕೆಲವರನ್ನು ಅರ್ಥಮಾಡಿಕೊಳ್ಳಲು ಆಗುವುದಿಲ್ಲವಲ್ಲಾ...?*
ಮೊದಲು ನಿಮ್ಮನ್ನು ನೀವು ಅರ್ಥ ಮಾಡಿಕೊಳ್ಳಿ. ಆಗ ಜಗವೇ ನಿಮಗೆ ಅರ್ಥವಾಗುತ್ತದೆ!

*ಎಂ.ಎಸ್.ಸೋಮಶೇಖರ್, ಮೈಸೂರು*
*ವಿವಾಹ ಎಂದರೇನು?*
ವಿಧಿವತ್ತಾಗಿ ವಾಸಿಸಲು ಹವಣಿಸಿಕೊಳ್ಳುವಿಕೆ!

*ಜಿ.ಆರ್.ಆದಿನಾರಾಯಣಮುನಿ, ಆದಿವಾಲ*
*ಏನು? ಮದುವೆ ಮಾಡಿಕೊಂಡರೆ ಸ್ವಾರ್ಥ ಹೆಚ್ಚಾಗುತ್ತದೆಯೇ?*
ಹೌದು. ನಾನು, ನನ್ನದು ಎಂಬ ಪಟ್ಟಿಗೆ ಹೆಚ್ಚು ಸೇರ್ಪಡೆಗಳಾಗುತ್ತವಲ್ಲಾ!

*ಅಮರಯ್ಯ, ಸುರಪೂರ*
*ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ಕಾರ್ಯಗಳಾವುವು?*
ಉಪದೇಶ ನೀಡುವುದು, ಗಾಸಿಪ್ ಹರಡುವುದು!

*ಮಾಲತಿರಾಜು, ಬೆಂಗಳೂರು*
*ರಸ್ತೆ ನಾಮಫಲಕಗಳ ಮೇಲೆಯೇ ಭಿತ್ತಿಪತ್ರ, ಚೀಟಿ ಅಂಟಿಸುತ್ತಾರಲ್ಲಾ?*




ವಾಸ್ತು ಪ್ರಕಾರ ಅಲ್ಲೇ ಅಂಟಿಸಿದರೆ ಲಾಭ ಎಂದು ಶಾಸ್ತ್ರದವರು ಹೇಳಿರುತ್ತಾರಂತೆ!

■ ರಾಮ್